ವಿ-72-148

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ಇವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

## ವಿಷಯ

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯಲ್ಲಿ ಕಳೆದ 05 ವರ್ಷಗಳಿಂದ ಸುಮಾರು 10 ಸಾವಿರ ಪೇಪರ್ ರೀಲ್ಸ್ ಗಳನ್ನು ಖರೀದಿಸಲಾಗಿದೆ. ಈ ರೀತಿ ಖರೀದಿಸಿರುವ ಪೇಪರ್ ರೀಲ್ಸ್ ಗಳಿಗೆ Actual weight (ತೂಕ) Gross weight (ತೂಕಕ್ಕೆ) ಹಣ ಸಂದಾಯ ಮಾಡಿ ಸಂಸ್ಥೆಗೆ ಒಂದು ಕೋಟಿ ರೂ ನಷ್ಟ ಉಂಟಾಗಿದೆ. ಈ ಹಿಂದೆ ಎಂ.ಪಿ.ಎಂ ನಿಂದ ಖರೀದಿ ಮಾಡುತ್ತಿದ್ದ ಸಂದರ್ಭದಲ್ಲಿ ಪೇಪರ್ ರೀಲ್ಸ್‌ಗೆ ನೆಟ್‌ವೈಟ್ (ತೂಕಕ್ಕೆ) ಹಣ ಸಂದಾಯ ಮಾಡಲಾಗುತ್ತಿತ್ತು. ಈಗ ಖಾಸಗಿ ಕಂಪನಿ/ಸಂಸ್ಥೆಯಿಂದ ಖರೀದಿ ಮಾಡುತ್ತಿರುವ ಪೇಪರ್ ರೀಲ್ಸ್ ಗೆ Gross weight (ತೂಕಕ್ಕೆ) ಹಣ ಸಂದಾಯ ಮಾಡುತ್ತಿರುವುದರಿಂದ ಸಂಸ್ಥೆಗೆ ಅಪಾರ ನಷ್ಟ ಉಂಟಾಗಿದೆ. ಪ್ಯಾಕೇಜ್ ತೂಕ ಮತ್ತು ಸಾಲ್ವೆ ಹಾಗೂ ಕೋರ ವೈಟ್ ಸೇರಿ ಪ್ರತಿ ಪೇಪರ್ ರೀಲ್ಸ್ ಗೆ 10-13 ಕೆ.ಜಿ ತೂಕವನ್ನು ಕಳೆದು Actual weight (ತೂಕ)ಕ್ಕೆ ಹಣ ಸಂದಾಯ ಮಾಡಬೇಕು. ಅದರ ಬದಲು ಎಲ್ಲವನ್ನು ಸೇರಿಸಿ Gross weight (ತೂಕಕ್ಕೆ) ಹಣ ಸಂದಾಯ ಮಾಡಿ ಸಂಸ್ಥೆಗೆ ಅಪಾರ ನಷ್ಟ ಉಂಟು ಮಾಡಿದ್ದಾರೆ ಮತ್ತು ಈ ಸಂಸ್ಥೆಯನ್ನು ರೋಗಗ್ರಸ್ಥ ಸಂಸ್ಥೆಯನ್ನಾಗಿ ಪರಿವರ್ತಿಸಲು ಹುನ್ನಾರ ನಡೆದಿದ್ದು, ಈ ರೀತಿ ನಷ್ಟ ಉಂಟುಮಾಡಿ ಖಾಸಗೀಕರಣ ಮಾಡುವುದಕ್ಕೆ ಆಸ್ಪದ ನೀಡಲು ಪ್ರಯತ್ನ ಮಾಡುತ್ತಿರುವ ಬಗ್ಗೆ ಗಮನ ಸೆಳೆದಿರುವ ಕುರಿತು.

## ಉತ್ತರ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಮುದ್ರಣ ಚಟುವಟಿಕೆಯಲ್ಲಿ ಕಾಗದಗಳು ಅತೀ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಕಾಗದಗಳ ಸಂಗ್ರಹಣೆಗಳಲ್ಲಿ ಅದರಲ್ಲೂ ರೀಲ್‌ಗಳ ಮಾದರಿಯಲ್ಲಿ ಸಂಗ್ರಹಿಸಲ್ಪಡುವ ಕಾಗದಗಳು ವಿವಿಧ ಅಳತೆಯನ್ನು ಒಳಪಡುತ್ತದೆ. ಅಳತೆಗೆ ತಕ್ಕಂತೆ ತೂಕ ಹಾಗೂ ಅದಕ್ಕೆ ಅನುಗುಣವಾಗಿ ರೀಲ್ ಪ್ಯಾಕಿಂಗ್‌ನೊಂದಿಗೆ ಸಂಗ್ರಹಿಸಲಾಗುತ್ತದೆ. ರೀಲ್ ಕಾಗದಗಳಲ್ಲಿ ಕಾಗದ ರೀಲ್ ಕೋರ್ ಹಾಗೂ ಪ್ಯಾಕಿಂಗ್ ಸೇರಿದಂತೆ ಮೂರು ವಿವಿಧ ಅಂಶಗಳು ಒಳಪಡಲಿದ್ದು (ಇದನ್ನು ಗ್ರಾಸ್ ತೂಕವೆಂದು ಪರಿಗಣಿಸಲಾಗುತ್ತದೆ). ಸಂಗ್ರಹಣೆ ಲೆಕ್ಕಕ್ಕೆ ಕಾಗದ ಅಂಶವನ್ನು ಮಾತ್ರ ಪರಿಗಣಿಸಬೇಕಾಗುತ್ತದೆ (ನೆಟ್ ತೂಕವೆಂದು ಪರಿಗಣಿಸಲಾಗುತ್ತದೆ). ಈ ಮೂರು ಅಂಶಗಳು ತೂಕಕ್ಕೆ ಸೇರಲಿದ್ದು, ಅದರಲ್ಲಿ ಕಾಗದವು ಹೆಚ್ಚು ತೂಕವನ್ನು ಹೊಂದಿದ್ದರೆ ರೀಲ್ ಕೋರ್ ಹಾಗೂ ಪ್ಯಾಕಿಂಗ್ ಅಂಶವು ಕಾಗದದ ಶೇ.0.5 ರಿಂದ 1% ರವರೆಗೆ ಇರುತ್ತದೆ. ಉದಾಹರಣೆಗೆ ಒಂದು ರೀಲ್ ತೂಕ 500 ಕೆ.ಜಿ. ಇದ್ದಲ್ಲಿ ರೀಲ್ ಕೋರ್ ಹಾಗೂ ಪ್ಯಾಕಿಂಗ್ 3 ರಿಂದ 5 ಕೆ.ಜಿ. ಇರುತ್ತದೆ. ಇಂಥಹ ಸಂದರ್ಭದಲ್ಲಿ ಕಾಗದಗಳನ್ನು ದಾಸ್ತಾನಿಗೆ ತೆಗೆದುಕೊಂಡು ಹಣ ಪಾವತಿಗೆ ಕೇವಲ ಕಾಗದ ಅಂಶಕ್ಕೆ ಮಾತ್ರ ಒಳಪಡಿಸಬೇಕಾಗುತ್ತದೆ. (ನೆಟ್ ತೂಕ)

ಈ ಹಿಂದೆ ಎಂ.ಪಿ.ಎಂ. ಕಾಗದ ಮಿಲ್‌ನಿಂದ ಸರಬರಾಜು ಮಾಡಲಾಗುತ್ತಿದ್ದ ರೀಲ್‌ಗಳಲ್ಲಿ Gross Weight, Net Weight ಮತ್ತು ರೀಲ್ ಕೋರ್ ಹಾಗೂ ಪ್ಯಾಕಿಂಗ್ ವೈಟ್ ಪ್ರತ್ಯೇಕವಾಗಿ ತೋರಿಸುತ್ತಿದ್ದರೂ, ಪ್ರಸ್ತುತ ಇಲಾಖೆಗೆ ಕಾಗದ ಸರಬರಾಜು ಮಾಡುತ್ತಿರುವ ಸಂಸ್ಥೆಯವರು ರೀಲ್ ಮೇಲೆ Net Weight ಮತ್ತು Gross Weight ಒಂದೇ ತೋರಿಸುತ್ತಿರುತ್ತಾರೆ. ಸದರಿ ಸಂಸ್ಥೆಯವರು ರೀಲ್ ಕೋರ್ ಹಾಗೂ ಪ್ಯಾಕಿಂಗ್ ವೈಟ್ ಕಳೆದ ನಂತರವೇ Net Weight ಮತ್ತು Gross Weight ಒಂದೇ ತೋರಿಸುತ್ತಿರುತ್ತಾರೆ. ಈ ಬಗ್ಗೆ ಇಲಾಖೆಯಲ್ಲಿ ಕಾಗದ ರೀಲ್ ಸರಬರಾಜು ನಂತರ ದಾಸ್ತಾನು ಪರಿಶೀಲನೆ ಅಧಿಕಾರಿಗಳು ಪ್ರತಿ ರೀಲನ್ನು ತೂಕ ಮಾಡಿ ನೆಟ್ ವೈಟ್ ಖಚಿತಪಡಿಸಿಕೊಂಡ ನಂತರವೇ ಸಂಸ್ಥೆಯವರಿಗೆ ನೆಟ್ ವೈಟ್ ಕಾಗದಕ್ಕೆ ಪಾವತಿ ಮಾಡಲಾಗಿರುತ್ತದೆ.

ಕಾಗದಗಳ ರೀಲ್‌ನಲ್ಲಿ ಗ್ರಾಸ್ ಹಾಗೂ ನೆಟ್ ಅಂಶಗಳ ಬಗ್ಗೆ ಬಹಳ ಎಚ್ಚರದಿಂದ ಅವಲೋಕಿಸಿ ಪ್ರತ್ಯೇಕ ರೀಲ್‌ಗಳನ್ನು ತೂಕ ಮಾಡಿಸಿ ಮಿಲ್ ಪ್ಯಾಕ್ ಆಧಾರಿತ ತೂಕಕ್ಕೂ ಸರಬರಾಜುಗೊಂಡ ರೀಲ್‌ನ ವಾಸ್ತವ್ಯದ ತೂಕಕ್ಕೂ ತುಲನೆ ಮಾಡಿ ನಿಖರವಾಗಿ ಪರಿಶೀಲಿಸಿ ಮುಂದಿನ ಕ್ರಮ ವಹಿಸಲಾಗುತ್ತದೆ. ರೀಲ್‌ಗಳಲ್ಲಿ ಗ್ರಾಸ್ ತೂಕ ಹಾಗೂ ನೆಟ್ ತೂಕವು ಸಾಮಾನ್ಯವಾಗಿ ಒಂದೇ ರೀತಿ ನಮೂದಿಸಿರುತ್ತಾರೆ. ಇಂಥಹ ಸಂದರ್ಭದಲ್ಲೂ ಸಹ ಇಲಾಖೆಯಲ್ಲಿ ಸದರಿ ರೀಲ್‌ಗಳನ್ನು ತೂಕಕ್ಕೆ ಒಳಪಡಿಸಿದಾಗ ಗ್ರಾಸ್ ತೂಕಕ್ಕಿಂತ ಸರಿಸುಮಾರು 4 ರಿಂದ 5 ಕೆ.ಜಿ. ಹೆಚ್ಚಳವಿರುತ್ತದೆ.

ಈ ಬಗ್ಗೆ ಆಡಿಟ್ ಪರಿಶೀಲನೆ ವೇಳೆ ಮಹಾಲೇಖಪಾಲರು ದಿ:27.11.2020 ರಂದು ನೀಡಿದ ಆಕ್ಷೇಪಣೆ ಸಂಖ್ಯೆ:35 ರಲ್ಲಿ ಇದೇ ವಿಚಾರವನ್ನು ಆಕ್ಷೇಪಣೆ ಮಾಡಿದ್ದು, ಆಡಿಟ್ ತಂಡಕ್ಕೆ ಅವರ ಸಮ್ಮುಖದಲ್ಲಿಯೇ ರೀಲ್‌ಗಳನ್ನು ತೂಕ ಮಾಡಿ ತೋರಿಸಲಾಗಿ ಆಡಿಟ್ ತಂಡದವರು ಸಂಸ್ಥೆಯವರು ಸರಬರಾಜು ಮಾಡುತ್ತಿರುವ ರೀಲ್‌ಗಳ ಮೇಲೆ ತೋರಿಸುತ್ತಿರುವ ನೆಟ್ ವೈಟ್ ಹಾಗೂ ಗ್ರಾಸ್ ವೈಟ್ ಒಂದೇ ಆಗಿದ್ದರೂ ಇಲಾಖೆಯು ನೆಟ್ ವೈಟ್‌ಗೆ ಪಾವತಿಸಿರುವುದನ್ನು ಒಪ್ಪಿಕೊಂಡು ತಮ್ಮ ಆಕ್ಷೇಪಣೆಯನ್ನು ಹಿಂಪಡೆದಿರುತ್ತಾರೆ.

ಗ್ರಾಸ್ ಹಾಗೂ ನೆಟ್ ಒಂದೇ ಇದ್ದಂತಹ ಸಂದರ್ಭದಲ್ಲಿ ತೂಕಕ್ಕೆ ಒಳಪಡಿಸಿದಾಗ ಹೆಚ್ಚುವರಿಯಾಗಿ ಗೋಚರಿಸಲ್ಪಡುವ ತೂಕವು ರೀಲ್ ಕೋರ್ ಹಾಗೂ ಪ್ಯಾಕಿಂಗ್ ಒಳಗೊಂಡಿದ್ದು, ಇವುಗಳು ಸಂಪೂರ್ಣವಾಗಿ ಇಲಾಖೆಯ ಆದಾಯದ ಸ್ವರೂಪವಾಗಿರುತ್ತದೆ. ಹೀಗಾಗಿ ನೆಟ್ ಹಾಗೂ ಗ್ರಾಸ್ ಒಂದೇ ಇರುವುದರಿಂದ ಮತ್ತು ರೀಲ್ ಕೋರ್ ಪ್ಯಾಕಿಂಗ್ ಆದಾಯದ ಅಂಶಕ್ಕೆ ಒಳಪಡುವುದರಿಂದ ಹಾಗೂ ಪಾವತಿಯೂ ಸಹ ನೆಟ್ ತೂಕಕ್ಕೆ ಕ್ರಮ ವಹಿಸಲಾಗುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ತರಹದ ನಷ್ಟ ಉಂಟಾಗಿರುವುದಿಲ್ಲ. ಬದಲಾಗಿ ರೀಲ್ ಕೋರ್ ಹಾಗೂ ಪ್ಯಾಕಿಂಗ್ ಸಾಮಗ್ರಿಗಳಿಂದ ಸರ್ಕಾರದ ಬೊಕ್ಕಸಕ್ಕೆ ಆದಾಯದ ಸ್ವರೂಪವಾಗಿರುತ್ತದೆ. ಒಂದು ರೀಲ್‌ನಲ್ಲಿ ಎರಡು ಪ್ರಮಾಣದ salvage ಬರುತ್ತದೆ ಎಂಬುದನ್ನು ಲೆಕ್ಕ ಹಾಕಲು ಸಾಧ್ಯವಿರುವುದಿಲ್ಲ.

**ಸಂಖ್ಯೆ:ಇಪಿ 77 ಇಎಸ್‌ಡಬ್ಲ್ಯೂ 2021**

(ಬಿ.ಸಿ.ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಹಾಗೂ ಸಕಾಲ ಸಚಿವರು